ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

೧೧ನೇ ವರ್ಷ ೨೧ನೇ ಸಂಚಿಕೆ ಬೆಲೆ ೩೦ ಪೈಸೆ

ಕೊಪ್ಪ ೨೩-೬-೧೯೯೧ ಭಾನುವಾರ ದೂರವಾಣಿ : ೧೧೪

ಕೃಷಿ ಉಪಕರಣಗಳ ಪ್ರಾತ್ಯಕ್ಷಿಕೆ

ಕೊಪ್ಪ : ಸಿಂಡಿಕೇಟ್ ಬ್ಯಾಂಕ್ ಕೃಷಿ ವಿಚಾರ ವಿನಿಮಯ ಕೇಂದ್ರದ ಸಹಕಾರದಿಂದ ಇಲ್ಲಿನ ಪುರಭವನದಲ್ಲಿ ತಾ. ೩೦-೬-೯೧ರ ಭಾನುವಾರ ಮಧ್ಯಾಹ್ನ ೨-೩೦ ಗಂಟೆಗೆ, ಕೇಂದ್ರ ಸರಕಾರದ ಅಸಾಂಪ್ರದಾಯಿಕ ಶಕ್ತಿ ಮೂಲಗಳ ಇಲಾಖೆಯ ವಿಜ್ಞಾನಿ ಪರಮೇಶ್ವರ್‌ರವರು ಸಾರ್ವಜನಿಕರಿಗೆ ಮತ್ತು ರೈತರಿಗೆ ಉಪಯುಕ್ತವಾದ ಉಪಕರಣಗಳ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಡಲಿದ್ದಾರೆ. ಅವರಲ್ಲಿ ಪ್ರಮುಖವಾದವು : ೧) ವೈಜ್ಞಾನಿಕ ಬೇಸಾಯದ ಸುಧಾರಿತ ಉಪಕರಣ, ೨) ಇನ್‌ಸ್ಟಂಟ್ ವಾಟರ್ ಹೀಟರ್, ೩) ಸುಧಾರಿತ ಒಲೆ ಮಾದರಿ ೪) ಲೋಲಿಫ್ಟ್ ಹ್ಯಾಂಡ್ ವಾಟರ್ ಪಂಪ್ ಮುಂತಾದುವು.

ಇದರೊಂದಿಗೆ, ವೈಜ್ಞಾನಿಕ ಬೇಸಾಯ ಮತ್ತು ವೈಜ್ಞಾನಿಕ ಬೇಸಾಯದ ಸುಧಾರಿತ ಉಪಕರಣಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಸಂಶೋಧನಾ ಕೇಂದ್ರಗಳಿಂದ ಸಲಹೆ ಮತ್ತು ಸಹಕಾರ ಪಡೆಯುವ ಬಗ್ಗೆ ಹಾಗೂ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಅಳವಡಿಸುವ ಬಗ್ಗೆ ಪರಮೇಶ್ವರ್ ಮಾಹಿತಿ ನೀಡಲಿದ್ದಾರೆ.

ಅತಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು, ಸಾರ್ವಜನಿಕರು, ಸ್ವಉದ್ಯೋಗದಲ್ಲಿ ಆಸಕ್ತಿ ಇರುವ ವರ್ಕ್‌ಶಾಪ್‌ಗಳವರು ಮತ್ತು ಇತರ ಆಸಕ್ತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ವಿನಂತಿಸಲಾಗಿದೆ.

ಸಾರ್ವಜನಿಕ ಹೋರಾಟ ಸಮಿತಿಯಿಂದ ಚಳುವಳಿ ಬೆದರಿಕೆ :

ಪ್ರಿನ್ಸಿಪಾಲ್ ವಿರುದ್ಧ ಮೊಯ್ಲಿಗೆ ದೂರು

ಕೊಪ್ಪ : ಇಲ್ಲಿನ ಕಿರಿಯ ಕಾಲೇಜು ಇನ್‌ಚಾರ್ಜ್ ಪ್ರಿನ್ಸಿಪಾಲ್ ರಾಮಕೃಷ್ಣಯ್ಯ ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳಲು ಇಲ್ಲಿನ ಸಾರ್ವಜನಿಕ ಹಿತ ರಕ್ಷಣಾ ಹೋರಾಟ ಸಮಿತಿ ಶಿಕ್ಷಣ ಸಚಿವ ವೀರಪ್ಪ ಮೊಯ್ಲಿಯವರನ್ನು ಒತ್ತಾಯಿಸಿದೆ.

ಶಾಲಾ ಮಟ್ಟದ ಪರೀಕ್ಷೆಗಳಲ್ಲಿ ಫೇಲಾದ ವಿದ್ಯಾರ್ಥಿಗಳಿಂದ ೧೦೦೦ ರೂ. ವರೆಗೂ ಲಂಚ ಪಡೆದು ಹಾಗೂ ಮುಗ್ಧ ವಿದ್ಯಾರ್ಥಿನಿಯರನ್ನು ತಮ್ಮ ಕಾಮದ ಹಸಿವು ಹಿಂಗಿಸಿಕೊಳ್ಳಲು ದುರುಪಯೋಗ ಪಡಿಸಿಕೊಂಡು, ಅವರುಗಳ ಉತ್ತರ ಪತ್ರಿಕೆಗಳನ್ನು ತಿದ್ದಿ ಅಥವಾ ತಿದ್ದಿಸಿ, ೨ನೇ ಪಟ್ಟಿಯಲ್ಲಿ ಪಾಸು ಮಾಡಿದ್ದಾರೆ ಎಂದು ಆಪಾದಿಸಲಾಗಿದೆ.

ಅತ್ಯಾಚಾರಕ್ಕೊಳಗಾದ ಹೆಣ್ಣು ಮಕ್ಕಳ ಹೇಳಿಕೆಗಳನ್ನು ಮಹಿಳಾ ವಕೀಲರ ಸಮ್ಮುಖದಲ್ಲಿ ದಾಖಲಿಸಿಕೊಂಡು ಅದರ ಪ್ರತಿಗಳನ್ನು ಸಹ ದೂರಿನೊಂದಿಗೆ ಲಗತ್ತಿಸಲಾಗಿದೆ.

ಇಂಥ ನತದೃಷ್ಟ ವಿದ್ಯಾರ್ಥಿನಿಯೊಬ್ಬಳು ಕೊಟ್ಟ ಹೇಳಿಕೆಯಲ್ಲಿ, "ನನ್ನ ಫಲಿತಾಂಶವನ್ನು ತಡೆಹಿಡಿದಿದ್ದರು. ಕೇಳಲು ಹೋದಾಗ, 'ಈಗ ಬಿಡುವಿಲ್ಲ; ಮನೆಗೆ ಬಾ' ಎಂದರು. ಮನೆಯಲ್ಲಿ ಅವರು ನನ್ನನ್ನು ಬಲವಂತವಾಗಿ ಮಾನಭಂಗ ಮಾಡಿದರು ಹಾಗೂ ಬೇರೆ ಯಾರಿಗೆ ಹೇಳದಂತೆ ಬೆದರಿಕೆ ಹಾಕಿದರು. ಆ ನಂತರವೂ ಪುನಃ ನನಗೆ ಮನೆಗೆ ಬರಲು ಹೇಳಿ ಕಳಿಸುತ್ತಿದ್ದರು. ಅಂತೂ ನನ್ನ ಫಲಿತಾಂಶ ಪಾಸಾಗಿತ್ತು. ಬೇರೆ ಹೆಣ್ಣು ಮಕ್ಕಳಿಗಾದರೂ ಹೀಗಾಗದಂತೆ ಕ್ರಮ ಕೈಗೊಳ್ಳಬೇಕು" ಎಂದು ತಿಳಿಸಿದ್ದಾಳೆ.

ಒಂದು ವಾರದೊಳಗೆ ಸೂಕ್ತ ತನಿಖೆ ನಡೆಸಿ ತಕ್ಕ ಕ್ರಮ ಕೈಗೊಳ್ಳದಿದ್ದಲ್ಲಿ ಸಾರ್ವಜನಿಕರನ್ನು ಸಂಘಟಿಸಿ ಚಳುವಳಿ ನಡೆಸುವುದಾಗಿಯೂ ಸಮಿತಿ ಎಚ್ಚರಿಸಿದೆ.

ಈ ದೂರಿನ ನಕಲುಗಳನ್ನು ಶಾಸಕರಿಗೂ, ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಿಗೂ ಸಹ ಸಲ್ಲಿಸಲಾಗಿದೆ.

ರ್‍ಯಾಂಕ್ ವಿಜೇತನಿಗೆ ಸನ್ಮಾನ

ಹರಿಹರಪುರ : ದಶಕಗಳ ನಂತರ ಜಿಲ್ಲೆಗೆ ಪಿಯುಸಿಯಲ್ಲಿ ರ್‍ಯಾಂಕ್ ಗಳಿಸಿ ಕೊಟ್ಟ, ಹೆಮ್ಮೆಗೆ ಪಾತ್ರನಾದ ಹಾಗೂ ಈ ಬಾರಿ ಪಿ.ಯು ಸಿ. ಕಲಾ ವಿಭಾಗದಲ್ಲಿ ೮ನೇ ರ್‍ಯಾಂಕ್ ಗಳಿಸಿರುವ ಕೆ. ಎಸ್. ಅನಿಲಕುಮಾರ್‌ನನ್ನು ಇಲ್ಲಿನ ರಾಷ್ಟ್ರೋತ್ಥಾನ ಬಳಗ ಈಚೆಗೆ ಆತ್ಮೀಯವಾಗಿ ಸನ್ಮಾನಿಸಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಳಗದ ಅಧ್ಯಕ್ಷ ವಾಸುದೇವ ನಲ್ಲೂರಾಯರು ಅನಿಲ್‌ಗೆ ಸನ್ಮಾನ ನೆರವೇರಿಸಿ ಅಭಿನಂದಿಸಿದರು. ಬಳಗದ ಸದಸ್ಯರಾದ ಡಾ|| ಧರ್ಮಪ್ಪ, ಮಂಜುನಾಥ್, ಕುಮಾರಿ ಛಾಯಾ, ನಂಜುಂಡ ಶಾಸ್ತ್ರಿ, ರಾಮಚಂದ್ರರಾವ್, ರಾಮಪ್ರಸಾದ್, ವಿ. ಎಂ. ಶಿವಮೂರ್ತಿ, ಡಾ|| ಶೇಷಗಿರಿ ಮುಂತಾದವರು ರ್‍ಯಾಂಕ್ ವಿಜೇತನನ್ನೂ ಅವರ ತಂದೆ–ತಾಯಿಗಳನ್ನೂ ಅಭಿನಂದಿಸಿ ಮಾತನಾಡಿದರು.

ಅನಿಲ್ ಅವರ ತಂದೆ ಕೆ. ಜಿ. ಎಸ್. ಶಾಸ್ತ್ರಿಯವರು ತಮ್ಮ ಮಗನ ವಿದ್ಯಾಭ್ಯಾಸ ಮತ್ತು ಇತರ ಚಟುವಟಿಕೆಗಳಲ್ಲಿ ತಾವು ನೆರವಾದ ಬಗೆಯನ್ನು ವಿವರಿಸಿದರು.

ಕುಮಾರಿ ಗೀತಾಂಬ ಸ್ವಾಗತಿಸಿ, ಕೆ. ಆರ್ ಭಾಸ್ಕರಾಚಾರ್ ವಂದಿಸಿದರು.

(ವರದಿ : ಬಿ. ವಿ. ಆರ್. ಪ್ರಸಾದ್)

ಜೂನ್ ೩೦ ರಂದು ಆಕಾಶವಾಣಿಯಲ್ಲಿ ಕೊಪ್ಪದ ಪಟ್ಟಣಶಾಲೆಯ ಮಕ್ಕಳ ಕಾರ್ಯಕ್ರಮ

ಕೊಪ್ಪ : ಇಲ್ಲಿನ ಪಟ್ಟಣ ಶಾಲೆಯ ೧ ರಿಂದ ೭ನೇ ತರಗತಿಯವರೆಗಿನ ಮಕ್ಕಳ ವಿವಿಧ ಕಾರ್ಯಕ್ರಮಗಳು ಇದೇ ಜೂನ್ ೩೦ನೇ ತಾರೀಖು ಭಾನುವಾರ ಬೆಳಿಗ್ಗೆ ೯ ೧೦ರಿಂದ ಪ್ರಸಾರವಾಗುವ ಆಕಾಶವಾಣಿಯ 'ಮಕ್ಕಳ ಕಾರ್ಯಕ್ರಮ'ದಲ್ಲಿ ಪ್ರಸಾರವಾಗಲಿವೆ ಎಂದು ಮುಖ್ಯೋಪಾಧ್ಯಾಯರಾದ ಕೆ.ಎಸ್. ಸುಬ್ರಮಣ್ಯ ಅವರು ತಿಳಿಸಿದ್ದಾರೆ.

ಈ ಕಾರ್ಯಕ್ರಮಗಳನ್ನು ಸುಮಾರು ೩ ತಿಂಗಳ ಹಿಂದೆ ಆಕಾಶವಾಣಿಯ ತಂತ್ರಜ್ಞರು ಧ್ವನಿ ಮುದ್ರಿಸಿಕೊಂಡಿದ್ದರು.

ನಕಲಿ 'ಕೃಷಿ ಸಹಾಯಕ'ನ ಬಗ್ಗೆ ಎಚ್ಚರ !

ನರಸಿಂಹರಾಜಪುರ : ಈ ತಾಲ್ಲೂಕಿನ ಬಿ ಕಣಬೂರು ವೃತ್ತದ ಕೃಷಿ ಸಹಾಯಕರಾಗಿದ್ದ ಹನುಮಂತೇಗೌಡರಿಗೆ ವರ್ಗವಾಗಿದೆ. ಆದಾಗ್ಯೂ ಇವರು ಇಲಾಖೆಯಿಂದ ಕೃಷಿ ಸಾಮಗ್ರಿಗಳಿಗೆ ಪರವಾನಗಿಗಳನ್ನು ನೀಡುವ ನೆಪದಲ್ಲಿ ಹಲವಾರು ರೈತರಿಂದ ಹಣ ಪಡೆದಿರುವುದು ಬೆಳಕಿಗೆ ಬಂದಿದೆ. ಆದ್ದರಿಂದ ಕೃಷಿ ಸಾಮಗ್ರಿಗಳಿಗೆ ಪರವಾನಗಿ ನೀಡುವ ಇವರ ಅಧಿಕಾರವನ್ನು ರದ್ದುಪಡಿಸಿ ಆಜ್ಞೆ ಹೊರಡಿಸಿದ್ದು, ಸಂಬಂಧಿಸಿದ ಸಂಸ್ಥೆಗೂ ಸೂಕ್ತ ತಿಳುವಳಿಕೆ ನೀಡಲಾಗಿದೆ. ಯಾರೇ ರೈತರು ಈ ಕೃಷಿ ಸಹಾಯಕರಿಗೆ ಹಣ ನೀಡಿದಲ್ಲಿ ಅವರೇ ಸ್ವತಃ ಜವಾಬ್ದಾರರಾಗಿರುತ್ತಾರೆಂದೂ, ಅದಕ್ಕೆ ವ್ಯವಸಾಯ ಇಲಾಖೆ ಜವಾಬ್ದಾರರಾಗುವುದಿಲ್ಲವೆಂದೂ, ಸಹಾಯಕ ಕೃಷಿ ನಿರ್ದೇಶಕರು ಎಚ್ಚರಿಸಿದ್ದಾರೆ.

ತಾರಾದೇವಿಗೆ ಕೇಂದ್ರ ಮಂತ್ರಿ ಹುದ್ದೆ

ಚಿಕ್ಕಮಗಳೂರು : ಲೋಕಸಭೆಗೆ ೨ನೇ ಬಾರಿಗೆ ಆಯ್ಕೆಯಾಗಿರುವ ಡಿ. ಕೆ. ತಾರಾದೇವಿ ಅವರಿಗೆ ನೂತನ ಕೇಂದ್ರ ಮಂತ್ರಿಮಂಡಲದಲ್ಲಿ ರಾಜ್ಯ ಸಚಿವೆ ಸ್ಥಾನ ನೀಡಲಾಗಿದೆ. ಅವರ ಖಾತೆ ಇನ್ನೂ ಗೊತ್ತಾಗಿಲ್ಲ.

ತಾರಾದೇವಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಿಂದ ತಮ್ಮ ಸಮೀಪದ ಬಿಜೆಪಿ ಅಭ್ಯರ್ಥಿ ಡಿ. ಸಿ. ಶ್ರೀಕಂಠಪ್ಪ ಅವರಿಗಿಂತ ೩೧೭೯೬ ಹೆಚ್ಚು ಮತಗಳನ್ನು ಗಳಿಸಿ ಆಯ್ಕೆಯಾಗಿದ್ದಾರೆ. ಅವರಿಗೆ ೨,೧೬, ೩೦೯ ಮತಗಳೂ ಬಿಜೆಪಿಗೆ ೧,೮೫,೨೦೫ ಮತಗಳೂ, ಸಿಪಿಐ ಅಭ್ಯರ್ಥಿ ಬಿ. ಕೆ. ಸುಂದರೇಶ್‌ಗೆ ೯೭,೬೧೭ ಮತಗಳೂ ಬಂದಿವೆ.

'ಕಳಪೆ ಬಿತ್ತನೆ ಬೀಜ' : ಸ್ಪಷ್ಟೀಕರಣ

ಪ್ರಿಯರೆ,

ದಿನಾಂಕ : ೨-೬-೯೧ರ ತಮ್ಮ ಪತ್ರಿಕೆಯಲ್ಲಿ, ಓದುಗರಾದ ಮೇಲ್ಪಾಲ್–ತುಪ್ಪೂರಿನ ಶ್ರೀ ಎಚ್. ಪಿ. ಗುರುಮೂರ್ತಿಯವರು, ಬಾಳೆಹೊನ್ನೂರಿನ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಮಾರಲಾಗುತ್ತಿರುವ ಇಂಟಾನ್‌ನಲ್ಲಿ ಬೆರಕೆ ಬೀಜ ಇರುವುದಾಗಿ ತಿಳಿಸಿದ್ದಾರಷ್ಟೆ. ಈ ಬಗ್ಗೆ ಸ್ಪಷ್ಟೀಕರಣ:

ಬಾಳೆಹೊನ್ನೂರಿನ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ, ಕೆಲವೊಂದು ಬಿತ್ತನೆ ಬೀಜದ ಚೀಲಗಳಲ್ಲಿ ಬೆರಕೆ ಇರುವುದು ಕಂಡುಬಂದಿದೆ. ಆದುದರಿಂದ ಖರೀದಿ ಮಾಡಬಯಸುವ ಪ್ರತಿಯೊಬ್ಬ ರೈತರಿಗೆ ಪ್ರತಿ ಚೀಲದ ಬಿತ್ತನೆ ಬೀಜವನ್ನು ತೋರಿಸಿ, ಅವರು ಸಮ್ಮತಿ ನೀಡಿದಲ್ಲಿ ಮಾತ್ರ ಕೊಡಲು ಸಂಬಂಧಿಸಿದ ಸಂಸ್ಥೆಯವರಿಗೆ ಸೂಚಿಸಿದೆ.

ಈಗಾಗಲೇ ಬೆರಕೆ ಇರುವ ಬೀಜವನ್ನು ಖರೀದಿಸಿದವರಿಗೆ ಬದಲಿ ಬಿತ್ತನೆ ಬೀಜವನ್ನು ಸರಬರಾಜು ಮಾಡಲು ಪತ್ರ ಬರೆಯಲಾಗಿದ್ದು, ಸದ್ಯದಲ್ಲಿಯೇ ಸೂಕ್ತ ವ್ಯವಸ್ಥೆ ಮಾಡಲಾಗುವುದು.

—ಸಹಾಯಕ ಕೃಷಿ ನಿರ್ದೇಶಕರು,
ನರಸಿಂಹರಾಜಪುರ.

ಶಹಭಾಷ್ ಪ್ರಿನ್ಸಿಪಾಲರೇ

ಪ್ರಿಯರೆ,

ಶಾಲಾ ವಿದ್ಯಾರ್ಥಿಯಾಗಿದ್ದಾಗ, ಕಛೇರಿಗಳಲ್ಲಿ ಲಂಚ ಯಾಕೆ ಕೊಡಬೇಕು? ಲಂಚ ಕೊಡದೇನೇ ಕೆಲಸ ಯಾಕೆ ಮಾಡಿಸಕ್ಕಾಗೋಲ್ಲ? ಎಂದೆಲ್ಲಾ ಹೇಳುವುದಿತ್ತು. ಆದರೆ ನಿಜ ಜೀವನದಲ್ಲಿ ಕಾರ್ಯತಃ ಇದೆಲ್ಲಾ ಅಸಾಧ್ಯವೆಂದು ಗೊತ್ತಾಗಲು ನನಗೆ ಬಹಳಷ್ಟು ದೀರ್ಘ ಕಾಲ ಬೇಕಾಯಿತು.

ನಮ್ಮ ಕೊಪ್ಪದ ಕಿರಿಯ ಕಾಲೇಜು ಪ್ರಿನ್ಸಿಪಾಲರು ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗಲೇ ಲಂಚದ ಮಹತ್ವ, ಅದರ ಪ್ರಭಾವಗಳನ್ನು ಪ್ರತ್ಯಕ್ಷ ನಿದರ್ಶನದ ಮೂಲಕ ಕಲಿಸಿಕೊಟ್ಟು ಅವರ 'ಉತ್ತಮ ಆದರ್ಶಮಯ ವ್ಯಕ್ತಿತ್ವ'ದ ಬೆಳವಣಿಗೆಗೆ ಈಗಲೇ ನಾಂದಿ ಹಾಡಿದ್ದಾರೆ. ಭೇಷ್ ಪ್ರಿನ್ಸಿಪಾಲರೇ !. ಮೇರಾ ಭಾರತ್ ಮಹಾನ್ !

— ಎಂ. ಹನೀಫ್,
ಕಳಸಾಪುರ ಎಸ್ಟೇಟ್, ಕೊಪ್ಪ.

ಓದುಗರ ಪತ್ರಗಳು

೨೪ ಗಂಟೆಯೂ ಬಾಗಿಲು ಮುಚ್ಚಿರುವ ಗ್ರಂಥಾಲಯ

ಕೊಪ್ಪ ತಾಲ್ಲೂಕಿನ ಬಸರೀಕಟ್ಟೆಯಲ್ಲಿ ಸರ್ಕಾರದ ಗ್ರಂಥಾಲಯವೊಂದಿದೆ — ಎಂದರೆ ಆ ಊರಿನ ನಾಗರಿಕರೇ ಎಲ್ಲಿದೆ ? ಎಂದು ಆಶ್ಚರ್ಯದಿಂದ ಕೇಳುತ್ತಾರೆ !! ಏಕೆಂದರೆ—ಈ ಗ್ರಂಥಾಲಯ ದಿನದ ೨೪ ಘಂಟೆಯೂ ಬಾಗಿಲು ಮುಚ್ಚಿಕೊಂಡಿರುತ್ತದೆ.

ಅಲ್ಲಿಗೆ ಬರಬೇಕಾದ ಪತ್ರಿಕೆಗಳೂ ಪ್ರತಿ ದಿನ ಬರುತ್ತಿವೆ. ಆದರೆ ಗ್ರಂಥಾಲಯಕ್ಕಲ್ಲ, ಗ್ರಂಥ ಪಾಲಕರ ಮನೆಗೆ ! ಆ ಗ್ರಂಥ ಪಾಲಕರು ಪ್ರತಿ ತಿಂಗಳೂ ಬರುವ ಸಂಬಳ ಮಾತ್ರ ತಪ್ಪದೇ ಎಣಿಸುತ್ತಿದ್ದಾರೆ.

ಈ 'ಸಂಪ್ರದಾಯ' ವರ್ಷಗಳಿಂದಲೂ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. "ಬಸರೀಕಟ್ಟೆಯಲ್ಲಿ ಎಲ್ಲವೂ ಇದ್ದು ಏನೂ ಇಲ್ಲ" ಎಂಬುದಕ್ಕೆ ಇದೂ ಒಂದು ಉದಾಹರಣೆಯಾಗಿದೆ. ಇದರ ಬಗ್ಗೆ ಸಂಬಂಧಪಟ್ಟವರು ಸೂಕ್ತ ತನಿಖೆ ನಡೆಸಿ ಗ್ರಂಥಾಲಯವನ್ನು ಈ ಕೂಡಲೇ ತೆರೆಸುತ್ತಾರೆಂದು ಆಶಿಸೋಣವೆ ?

—ನಾಗರಿಕರು, ಬಸರೀಕಟ್ಟೆ.
(೧೬ ಜನರ ಸಹಿಗಳಿವೆ)

ಪ್ರಶ್ನೆ ಪತ್ರಿಕೆಗಳು ಸೃಷ್ಟಿಸಿದ ಗೊಂದಲ : ಎಇಓ ಒಬ್ಬರೇ ಬಲಿ ಪಶುವಾದರೇಕೆ ?

ಪ್ರಿಯರೆ,

ದ್ವಿತೀಯ ಪಿ.ಯು.ಸಿ. ರಾಜ್ಯ ಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಗಳು ಬಯಲಾಗಿವೆ ಎಂಬ ಕಾರಣದಿಂದ ಬದಲಿ ಪ್ರಶ್ನೆ ಪತ್ರಿಕೆಗಳನ್ನು ಕಳಿಸಲಾಗಿದ್ದು, ಪರೀಕ್ಷೆಯ ದಿನ ದಂದು ತಾಲ್ಲೂಕು ಖಜಾನೆಯಿಂದ ಇವನ್ನು ಕೊಂಡೊಯ್ಯುವಾಗ, ಹಳೇ ಪ್ರಶ್ನೆ ಪತ್ರಿಕೆಗಳೇ ವಿತರಣೆಯಾಗಿ, ಅವಕ್ಕೇನೇ ವಿದ್ಯಾರ್ಥಿಗಳು ಉತ್ತರಿಸಿದ ಘಟನೆಗೆ ಸಂಬಂಧಿಸಿದಂತೆ ತನಿಖೆ ನಡೆದು, ಕರ್ತವ್ಯ ಲೋಪದ ನೆಲೆಯಲ್ಲಿ ಕೊಪ್ಪದ ಎಇಓರವರನ್ನು ಅಮಾನತಿನಲ್ಲಿಡಲಾಗಿದೆ ಎಂದು ತಮ್ಮ ಪತ್ರಿಕೆಯಲ್ಲಿ ವರದಿಯಾಗಿದೆ.

ಈ ಸಂದರ್ಭದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಟ್ರೆಜರಿಯಿಂದ ಹೊರ ತೆಗೆಯುವಾಗ ಕಸ್ತೂರಬಾ ಕಾಲೇಜಿನ ಪ್ರಿನ್ಸಿಪಾಲ್, ಎ.ಇ.ಓ ಮತ್ತು ತಹಶೀಲ್ದಾರ್ ಈ ಮೂವರಿಗೂ ಜವಾಬ್ದಾರಿಯಿತ್ತಲ್ಲವೆ ? ತಾಲ್ಲೂಕು ಖಜಾನೆಯ ಕಸ್ಟೋಡಿಯನ್ ಆಗಿರುವವರು ತಹಶೀಲ್ದಾರರು. ಹೀಗಿರುವಾಗ ಇಲ್ಲಿ ಆದ ಕರ್ತವ್ಯ ಲೋಪಕ್ಕೆ ಎ.ಇ.ಓ. ಒಬ್ಬರೇ ಸಂಪೂರ್ಣ ಹೊಣೆಗಾರರಾಗುವುದು ಹೇಗೆ ? ಅವರೊಬ್ಬರನ್ನೇ ಯಾತಕ್ಕಾಗಿ ಬಲಿಪಶುವನ್ನಾಗಿ ಮಾಡಲಾಗಿದೆ ?

ಪ್ರಶ್ನೆ ಪತ್ರಿಕೆಗಳು ಬಯಲಾಗಿದೆಯೆಂದು ಸೂಕ್ತವಾಗಿ ತಿಳಿಸಿದ ನಂತರ, ಬದಲಿ ಪ್ರಶ್ನೆಪತ್ರಿಕೆಗಳನ್ನು ತರಬೇಕಾದುದು ನಿಯಮ. ಇಲ್ಲಿ ಹಿಂದಿನ ಪ್ರಶ್ನೆ ಪತ್ರಿಕೆಗು ತಾಲ್ಲೂಕು ಖಜಾನೆಯಲ್ಲಿ ಹಾಗೆಯೇ ಹೇಗೆ ಉಳಿದವು? ಆಕಸ್ಮಾತ್ ಉಳಿಯಿತೇ ಆದಲ್ಲಿ ಜಾಗ್ರತೆಯಿಂದ ಇವನ್ನು ಕೋಣೆಯ ಬೇರೆಸೇ ಜಾಗದಲ್ಲಿ ಭದ್ರವಾಗಿ ಯಾಕೆ ಇಡಲಿಲ್ಲ ?

—ಟಿ.ಕೆ. ಪ್ರಭಾಕರ್,
ತೆಂಗಿನಮನೆ–ಕಲ್ಕೆರೆ.

ಉತ್ತಮ ಲೇಖನ

ಪ್ರಿಯರೆ,

ದಿನಾಂಕ. ೧೬-೬-೯೧ರ 'ಮುಂಜಾವು'ನಲ್ಲಿ ವೈ.ಗ. ಜಗದೀಶ್‌ರವರ 'ಇಸ್ಪೀಟ ಎಂಬ ಮದ್ದಿಲ್ಲದ ಮಾರಿ'....ಎಂಬ ಲೇಖನ ಒಳ್ಳೆಯದಿತ್ತು. ಇಸ್ಪೀಟ್ ಆಟ ಮುಂದುವರಿದವರ ಲಕ್ಷಣ ಎಂಬ ಭಾವನೆ ವಿದ್ಯಾವಂತರಲ್ಲಿದೆ ಮತ್ತು ಎಲ್ಲಾ ಕ್ಷೇತ್ರದಲ್ಲೂ ವ್ಯಾಪಿಸಿದೆ. ನಮ್ಮೂರಲ್ಲಂತೂ ಇದರ ಹಾವಳಿಗೆ ಎಲ್ಲವನ್ನೂ ಕಳಕೊಂಡು 'ಸನ್ಯಾಸಿ' ಯಾದವರು, ಮನೆಮಾರುಗಳನ್ನು ಕಳಕೊಂಡು 'ದೇಶಾಂತರ' ಹೋದವರು ಇಂಥ ಹತ್ತಾರು ಉದಾಹರಣೆಗಳು ಕಣ್ಣೆದುರಿಗಿವೆ.

—ನಾ. ಕಾರಂತ ಪೆರಾಜೆ,
ಸುಳ್ಯ. ದ. ಕ.

ಶುಭಾಶಯಗಳು

ಪ್ರಿಯರೆ,

ಜಂಪಾಪುರದ ಇತಿಹಾಸಕ್ಕೊಂದು ಕೊಡುಗೆ ನೀಡಿದ, ಪಿ. ಯು ಸಿ. ಯಲ್ಲಿ ಎಂಟನೆ ರ್‍ಯಾಂಕ್ ಗಳಿಸಿದ ಅನಿಲ್‌ಕುಮಾರ್‌ರವರಿಗೆ ನನ್ನ ಶುಭಾಶಯಗಳು.

ಅನಿಲ್‌ಕುಮಾರ್ ಗ್ರಾಮೀಣ ಪ್ರದೇಶದಲ್ಲಿರುವ ಹಲವಾರು ಸುಪ್ತ ಪ್ರತಿಭೆಗಳ ದ್ಯೋತಕವಾಗಿ ಹೊರಹೊಮ್ಮಿದ್ದಾರೆ. ಅವರ ಈ ಯಶಸ್ಸು ಗ್ರಾಮೀಣ ಪ್ರದೇಶದ, ಅದರಲ್ಲೂ ಮಲೆನಾಡಿನ ವಿದ್ಯಾರ್ಥಿಗಳಿಗೆ ಖಂಡಿತಾ ಪ್ರೋತ್ಸಾಹಕರವಾದ ಸಂಗತಿ.

ಅನಿಲ್ ಭವಿಷ್ಯ ಉಜ್ವಲವಾಗಲಿ ಎಂದು ನನ್ನ ಹಾರೈಕೆ

ಶೃಂಗೇರಿ ನಾಗರಾಜರಾವ್,
ಮೈಸೂರು.

ಮಾದರಿ ವಿದ್ಯಾರ್ಥಿ

ಪ್ರಿಯರೆ,

ಮುಂಜಾವು ೧೬-೬-೯೧ರ ಸಂಚಿಕೆಯಲ್ಲಿ ಮೂಡಿಬಂದ, ಜೆ ಎನ್. ಶ್ರೀನಿಧಿಯವರ ಲೇಖನ ಪ್ರತಿಭಾವಂತ ವಿದ್ಯಾರ್ಥಿ ಕೆ. ಎನ್. ಅನಿಲಕುಮಾರನ ಸಾಧನೆಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದೆ.

ಪಿ.ಯು.ಸಿ. ಕಲಾ ವಿಭಾಗದಲ್ಲಿ ೮ನೇ ರ್‍ಯಾಂಕ್ ಗಳಿಸಿ ಚಿಕ್ಕಮಗಳೂರು ಜಿಲ್ಲೆಗೆ ಕೀರ್ತಿ ತಂದ ಆತನ ಯಶಸ್ಸಿಗೆ ತುಂಬು ಹೃದಯದ ಅಭಿನಂದನೆಗಳು.

—ಶಂ ನ ಶೇಷಗಿರಿ,
ಪ್ರೌಢಶಾಲೆ, ಜಯಪುರ.

ಇಸ್ಪೀಟ್‌ಗೊಂದು ಬದಲಿ ಮನರಂಜನೆ ಮಾರ್ಗ

ಪ್ರಿಯರೆ.

'ಮದ್ದಿಲ್ಲದ ಮಾರಿ' ಇಸ್ಪೀಟಿನ ಸಂಸ್ಕೃತಿ ಬಹುಶಃ ನಮ್ಮ 'ಊಟದ ಮನೆ'ಗಳ ಸಂಸ್ಕೃತಿಯಿಂದಲೇ ಹುಟ್ಟಿತೋ ಏನೋ! ಎಂಬಷ್ಟು ವ್ಯಕ್ತಿಗೆ [illegible] ಅದಕ್ಕೂ ನಂಟು ಅಂಟಿಕೊಂಡಿರುವುದನ್ನು ಕಾಣುತ್ತೇವೆ.

ಆದರೆ ಈಚೆ [illegible] ನೋಡಿದ ಒಂದು 'ಊಟದ ಮನೆ'[illegible] ಹೇರೂರಿನ 'ಹವಿಸಂ' ಬಳಗದ ಸದಸ್ಯರೊಬ್ಬರು ರೂಪಿಸಿರುವ ಕಾರ್ಯಕ್ರಮವೊಂದು ದಾರಿ ದೀಪದಂತೆ ನನಗೆ ಭಾಸವಾಯಿತು.

ಮನೆಯಲ್ಲಿ ಸೇರಿರುವ ನೆಂಟರಿಷ್ಟರನ್ನೆಲ್ಲ (ಮುದುಕರು, [illegible], ಮಕ್ಕಳನ್ನೆಲ್ಲಾ) ಜಗಲಿಯಲ್ಲಿ [illegible], ಅವರಿಂದಲೇ ಹಾಡು, ಜೋಕ್ಸ್, ಅಂತ್ಯಾಕ್ಷರಿ, ಒಗಟು, ಭಾವಗೀತೆ, ಜನಪದ [illegible]ತೆ, ಸೋಬಾನೆ ಪದ ಮುಂತಾದ ಹಲವು ಹತ್ತು ರಸಮಂಜರಿ ಕಾರ್ಯಕ್ರಮವನ್ನು ಆ ಸದಸ್ಯರು ಸಂಯೋಜಿಸಿದ್ದರು. ಮನೆ ಮಂದಿಗೂ ನೆಂಟರಿಷ್ಟರಿಗೂ ಉತ್ತಮ ಮನರಂಜನೆಯ ಜೊತೆಗೆ ಇಸ್ಪೀಟನ್ನು ದೂರವಿಡಲು ಕೂಡ ಸಹಕರಿಸುವ ಇಂಥ ಕಾರ್ಯಕ್ರಮದಿಂದ ಒಳ್ಳೊಳ್ಳೆಯ ಪ್ರತಿಭೆಗಳು ಹೊರಹೊಮ್ಮಲು ಅವಕಾಶವೂ ಧೈರ್ಯವೂ ದೊರೆಯುತ್ತವೆ. ಹೊಸ ಹೊಸ ಕಲಾ ಮತ್ತು ಮನರಂಜನಾ ಆಟಗಳು ಸಹ ಮೂಡಿ ಬರಲು ಇದು ನೆರವಾಗಬಲ್ಲದು

ಇಂಥ ಕಾರ್ಯಕ್ರಮಗಳು ಈಗೀಗ ಅತ್ತ ಕಡೆ ಸರ್ವೇಸಾಮಾನ್ಯವಾಗುತ್ತಿವೆಯಂತೆ. 'ಹವಿಸಂ'ನವರ ಈ ಪ್ರಯತ್ನ ಅನುಕರಣೀಯ

—ಎಸ್. ಆರ್. ಶಿವಶಂಕರ,
ಕೊಪ್ಪ.

ಕೊಪ್ಪ (ಮಧ್ಯಾಂತರ) ಮಂಡಲ ಪಂಚಾಯಿತ್ತಿ ಕಾರ್ಯಾಲಯ
ಕೊಪ್ಪ-ಚಿಕ್ಕಮಗಳೂರು ಜಿಲ್ಲೆ.

ದಿನಾಂಕ ೭-೬-೧೯೯೧.

ಕೊಪ್ಪ ಬಸ್ ನಿಲ್ದಾಣದ ಹತ್ತಿರ ಇರುವ ಮಂಡಲ ಪಂಚಾಯಿತಿಗೆ ಸೇರಿರುವ
೧೦ ಅಂಗಡಿ ಮಳಿಗೆಗಳಲ್ಲಿ ವ್ಯಾಪಾರ ಮಾಡುವ ಲೈಸೆನ್ಸ್ ಹಕ್ಕಿನ
ಅಕ್ಷನ್ ನೋಟಿಫಿಕೇಶನ್.

ನೋಟಿಫಿಕೇಶನ್ ಸಂಖ್ಯೆ/ಎಸ್.ಸಿ (೧) ಪಿ. ಆರ್ ೭೯/೯೧-೯೨/ದಿನಾಂಕ ೭-೬-೯೧

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಕೊಪ್ಪ (ಮಧ್ಯಾಂತರ) ಮಂಡಲ ಪಂಚಾಯಿತಿಗೆ ಸೇರಿರುವ ಬಸ್ ನಿಲ್ದಾಣದ ಹತ್ತಿರ ಇರುವ ೧೦ ಅಂಗಡಿ ಮಳಿಗೆಗಳಲ್ಲಿ ದಿನಾಂಕ ೧-೮-೧೯೯೧ರಿಂದ ೩೧-೭-೧೯೯೬ರವರೆಗಿನ ೫ ವರ್ಷಗಳ ಕಾಲಾವಧಿಗೆ ವ್ಯಾಪಾರ ಮಾಡುವ ಲೈಸೆನ್ಸ್ ಹಕ್ಕನ್ನು ದಿನಾಂಕ ೭-೭-೯೧ರಂದು ಬೆಳಿಗ್ಗೆ ೧೧-೦೦ ಗಂಟೆಗೆ ಮಂಡಲ ಪಂಚಾಯಿತಿ ಕಾರ್ಯಾಲಯದಲ್ಲಿ ಬಹಿರಂಗ ಹರಾಜು ಮೂಲಕ ಮಂಡಲ ಪಂಚಾಯಿತಿ ಪ್ರಧಾನರು ಯಾ ಕಾರ್ಯದರ್ಶಿಯವರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಿಲೇವಾರಿ ಮಾಡಲಾಗುವುದು. ಇಷ್ಟಪಟ್ಟವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಪಡೆಯಬಹುದಾಗಿರುತ್ತೆ.

ಷರತ್ತುಗಳು

೧) ಲೈಸೆನ್ಸ್ ಹಕ್ಕನ್ನು ಪಡೆಯಲು ಹರಾಜಿನಲ್ಲಿ ಭಾಗವಹಿಸುವವರು ಬಿಡ್ ಮಾಡುವುದಕ್ಕೆ ಮುಂಚೆ ೫೦೦೦-೦೦ ಡಿಪಾಜಿಟ್ ಮಾಡತಕ್ಕದ್ದು.

೨) ಮಂಡಲ ಪಂಚಾಯಿತಿಗೆ ಬಾಕಿದಾರರಾಗಿರುವವರು ಬಿಡ್‌ನಲ್ಲಿ ಭಾಗವಹಿಸಲು ಅನರ್ಹರಾಗಿರುತ್ತಾರೆ.

೩) ಆಖೈರು ಬಿಡ್‌ದಾರರು ಹರಾಜಿನಲ್ಲಿ ಭಾಗವಹಿಸುವಾಗ ಕಟ್ಟಿದ ಡಿಪಾಜಿಟ್ ಮೊಬಲಗು ಸೇರಿ ಒಟ್ಟು (೧೦,೦೦೦) ಹತ್ತು ಸಾವಿರ ರೂಪಾಯಿಗಳ ಡಿಪಾಜಿಟನ್ನು ಹರಾಜು ಮುಗಿದ ಕೂಡಲೇ ಕಟ್ಟಿ ರಸೀದಿ ಪಡೆಯತಕ್ಕದ್ದು.

೪) ಉಳಿದ ಷರತ್ತು ಮತ್ತು ವಿವರಗಳನ್ನು ಈ ಕಾರ್ಯಾಲಯದಿಂದ ದಿನಾಂಕ ೭-೬-೧೯೯೧ರಂದು ಹೊರಡಿಸಿರುವ ನೋಟಿಫಿಕೇಶನ್ ಕರಪತ್ರದಲ್ಲಿ ಹಾಗೂ ಈ ಕಾರ್ಯಾಲಯದಲ್ಲಿ ಪಡೆಯಬಹುದು.

(ಸಹಿ) ಪಿ.ಬಿ. ವಿವೇಕ್,
ಪ್ರಧಾನರು,
ಕೊಪ್ಪ (ಮಧ್ಯಾಂತರ) ಮಂಡಲ
ಪಂಚಾಯಿತ್ತಿ, ಕೊಪ್ಪ.

(ಸಹಿ) ಆರ್. ಗಣೇಶ್,
ಕಾರ್ಯದರ್ಶಿಗಳು
ಕೊಪ್ಪ (ಮಧ್ಯಾಂತರ) ಮಂಡಲ
ಪಂಚಾಯಿತ್ತಿ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀಪಶಿಖೆ ಅಚ್ಚುಕೂಟ, ಕೊಪ್ಪ.